# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಎಂ.ಎನ್. ಶಂಕರನಾರಾಯಣ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಎಂ.ವಿ.ರವಿನಂದನ, ಹಿಂದಿನ ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಮಾಗಡಿ ಇವರಿಗೆ ವಿರುದ್ಧ ಆರೋಪಗಳ ಕುರಿತು ಇಲಾಖಾ ವಿಚಾರಣೆ – ದಂಡನೆ ವಿಧಿಸುವ ಬಗ್ಗೆ ಆದೇಶ.

ಓದಲಾಗಿದೆ.

1. ಮಾನ್ಯ ಉಪಲೋಕಾಯುಕ್ತರ ಲೋಕಾಯುಕ್ತ ಕಾಯ್ದೆ-1984 ರ ಕಲಂ 12(3) ರ ವರದಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿ.ಡಿ–2752/ಡಿಆರ್‌ಇ–5 ದಿ:12.3.2015
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 40 ಇಎನ್‌ಕ್ಯೂ 2015, ದಿನಾಂಕ:13.5.2015.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ:Uplok-2/DE/264/2015, ARE-7, Dated: 18.06.2018 ಇದರೊಂದಿಗೆ ವಿಚಾರಣಾ ವರದಿ, ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸು ಇತರೆ ದಾಖಲೆಗಳು.
4. ಸರ್ಕಾರದ 2 ನೇ ಕಾರಣ ಕೇಳುವ ನೋಟಿಸ್ ಸಂಖ್ಯೆ: ಗ್ರಾಅಪ 55 ಇಎನ್‌ಕ್ಯೂ 2018, ದಿನಾಂಕ:10.7.2018.
5. ಆರೋಪಿತರ ವಿವರಣೆ ದಿನಾಂಕ:
   1. ಎಂ.ಎನ್.ಶಂಕರನಾರಾಯಣ : ದಿ:03.8.2018
   2. ಎಂ.ವಿ.ರವಿನಂದನ್ : ದಿ:03.8.2018

## ಪ್ರಸ್ತಾವನೆ:–

ಶ್ರೀ ಶಂಕರಪ್ಪ ತಂದೆ ಲೇಟ್ ರಾಮಯ್ಯ ಬಿಸ್ಕೂರು ಗ್ರಾಮ ಮತ್ತು ಅಂಚೆ, ಕುದೂರು ಹೋಬಳಿ ಇವರು ಲೋಕಾಯುಕ್ತ ಕಛೇರಿಗೆ ಸಲ್ಲಿಸಿದ್ದ ದೂರಿನ ಕುರಿತು ಮಾನ್ಯ ಉಪಲೋಕಾಯುಕ್ತರು ತನಿಖೆ ಕೈಗೊಂಡು ಮೇಲೆ ಓದಲಾದ ಕ್ರಮಾಂಕ (1) ರ ದಿನಾಂಕ:12.3.2015 ರಲ್ಲಿ ಲೋಕಾಯುಕ್ತ ಕಾಯ್ದೆ ಕಲಂ 12(3) ರ ವರದಿಯನ್ನು ಇತರೆ ದಾಖಲೆಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸಿದ್ದರು. ಸದರಿ ವರದಿಯನ್ನು ಪರಿಶೀಲಿಸಲಾಗಿ, ಆರೋಪಗಳು ಮೇಲ್ನೋಟಕ್ಕೆ ಸಾಭೀತಾಗುವಂತೆ ಕಂಡು ಬಂದ ಹಿನ್ನೆಲೆಯಲ್ಲಿ ವರದಿಯಲ್ಲಿ ಕಂಡು ಬಂದ ಆರೋಪಗಳ ಕುರಿತು ಈ ಕೆಳಕಂಡ ಅಧಿಕಾರಿಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957ರ ನಿಯಮ 11 ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಮೇಲೆ ಓದಲಾದ ಕ್ರಮಾಂಕ (2) ರ ದಿನಾಂಕ:13.5.2015 ರ ಆದೇಶದಲ್ಲಿ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು:–

1. **ಶ್ರೀ ಶಿವಕುಮಾರ್, ಕಾರ್ಯದರ್ಶಿ (ನಿವೃತ್ತ) ಬಿಸ್ಕೂರು ಗ್ರಾಮ ಪಂಚಾಯತ್,**
2. **ಶ್ರೀ ಎಂ.ವಿ.ರವಿನಂದನ್, ಹಿಂದಿನ ಸ.ಇಂ, ಪಂ.ರಾ.ಇಂ ಉಪವಿಭಾಗ, ಮಾಗಡಿ.**
3. **ಶ್ರೀ ಎಂ.ಎನ್.ಶಂಕರನಾರಾಯಣ, ಹಿಂದಿನ, ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಮಾಗಡಿ**
4. **ಶ್ರೀ ಡಾ: ಕೃಷ್ಣಾರೆಡ್ಡಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಮಾಗಡಿ.**

ಪ್ರಸಕ್ತ ಪ್ರಕರಣದಲ್ಲಿನ ಆರೋಪಗಳ ಕುರಿತು ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರು ಅಪರ ನಿಬಂಧಕರು, ವಿಚಾರಣೆಗಳು–7 ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಕ ಮಾಡಿರುತ್ತಾರೆ.

---2

ವಿಚಾರಣಾಧಿಕಾರಿಗಳು ಎಲ್ಲಾ ನಾಲ್ಕು ಆರೋಪಿತರಿಗೆ ಆರೋಪ ಪಟ್ಟಿ ಜಾರಿ ವಿಚಾರಣೆ ನಡೆಸಿದ್ದು ಅಂತಿಮವಾಗಿ ಸಲ್ಲಿಸಿರುವ ವರದಿಯಲ್ಲಿ ಆರೋಪಿತರ ವಿರುದ್ಧದ ಆರೋಪಗಳು ಸಾಭೀತಾಗಿರುತ್ತವೆ ಎಂದು ನಿರ್ಣಯಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರು ವಿಚಾರಣಾಧಿಕಾರಿಗಳ ನಿರ್ಣಯಕ್ಕೆ ಸಹಮತಿ ವ್ಯಕ್ತಪಡಿಸಿ, ಆರೋಪಿತರ ವಿರುದ್ಧ ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ದಂಡನೆ ವಿಧಿಸಲು ಮೇಲೆ ಓದಲಾದ ಕ್ರಮಾಂಕ (3) ರ ದಿನಾಂಕ: 18.6.2018 ರಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ. ವಿಚಾರಣಾ ವರದಿಯ ಕುರಿತು ಕ್ರಮ ಕೈಗೊಳ್ಳುವ ಪೂರ್ವದಲ್ಲಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಾಗಿದೆ.

1. ಶ್ರೀ ಶಿವಕುಮಾರ್, ಕಾರ್ಯದರ್ಶಿ, ಬಿಸ್ಕೂರು ಗ್ರಾಮ ಪಂಚಾಯತ್ ಇವರು ಸೇವೆಯಿಂದ ವಯೋ ನಿವೃತ್ತಿ ಹೊಂದಿದ್ದು ಸದರಿಯವರಿಗೆ ದಂಡನೆ ವಿಧಿಸುವ ಸಕ್ಷಮ ಪ್ರಾಧಿಕಾರವು ನಿರ್ದೇಶಕರು, ಪಂಚಾಯತ್ ರಾಜ್, ಗ್ರಾ.ಅ.ಪಂ.ರಾಜ್ ಇಲಾಖೆರವರಾಗಿರುವುದರಿಂದ ದಿನಾಂಕ:10.7.2018 &24.8.2018 ರ ಅನಧಿಕೃತ ಟಿಪ್ಪಣಿಯಲ್ಲಿ ಪ್ರಸ್ತಾವನೆಯನ್ನು ನಿರ್ದೇಶಕರು, ಪಂಚಾಯತ್ ರಾಜ್ ಇವರಿಗೆ ಕಳುಹಿಸಲಾಗಿದೆ.
2. ಡಾ:ಕೃಷ್ಣಾರೆಡ್ಡಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಮಾಗಡಿ, ಇವರು ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗೆ ಸೇರಿದ ಅಧಿಕಾರಿಯಾಗಿರುವುದರಿಂದ ಸದರಿಯವರಿಗೆ ದಂಡನೆ ವಿಧಿಸಲು ಸದರಿ ಇಲಾಖೆಗೆ ದಿನಾಂಕ:10.8.2018ರಂದು ಪ್ರಸ್ತಾವನೆ ಕಳುಹಿಸಲಾಗಿದೆ.
3. ಉಳಿದಂತೆ ಶ್ರೀ ಎಂ.ಎನ್. ಶಂಕರನಾರಾಯಣ, ಹಿಂದಿನ ಸ.ಕಾ.ಇಂ ಮತ್ತು ಶ್ರೀ ಎಂ.ವಿ.ರವಿನಂದನ, ಸಹಾಯಕ ಇಂಜಿನಿಯರ್ ಇವರಿಗೆ ಈ ಇಲಾಖೆಯಿಂದ ವಿಚಾರಣಾ ವರದಿ, ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನೊಂದಿಗೆ ಮೇಲೆ ಓದಲಾದ ಕ್ರಮಾಂಕ (3) ರ ದಿನಾಂಕ:26.12.2017 ರಂದು 2 ನೇ ಕಾರಣ ಕೇಳುವ ನೋಟಿಸ್ ಜಾರಿ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ (5) ರಲ್ಲಿ ಶ್ರೀ ಎಂ.ಎನ್. ಶಂಕರನಾರಾಯಣ, ಹಿಂದಿನ ಸ.ಕಾ.ಇಂ ಮತ್ತು ಶ್ರೀ ಎಂ.ವಿ.ರವಿನಂದನ, ಸಹಾಯಕ ಇಂಜಿನಿಯರ್ ಇವರು ವಿವರಣೆ ಸಲ್ಲಿಸಿ ತಮ್ಮ ವಿರುದ್ಧದ ಆರೋಪಗಳನ್ನು ನಿರಾಕರಿಸಿ, ದೋಷಮುಕ್ತಗೊಳಿಸುವಂತೆ ಕೋರಿರುತ್ತಾರೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ವಿಚಾರಣಾ ವರದಿ, ದಾಖಲೆಗಳು ಸಾಕ್ಷಿಗಳ ಹೇಳಿಕೆಗಳು, ಆಪಾದಿತರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಪರಿಶೀಲಿಸಿರುತ್ತದೆ. ಪ್ರಸಕ್ತ ಪ್ರಕರಣದಲ್ಲಿ ಆರೋಪಿತರ ವಿರುದ್ಧ ಜಾರಿ ಮಾಡಲಾದ ಆರೋಪ ಪಟ್ಟಿಯಲ್ಲಿ ಮಾಡಲಾದ ಆರೋಪಗಳು ಈ ಕೆಳಕಂಡಂತಿವೆ:-

"You have violated Government guiedlins and got executed the works using machines instead of deploying manpower and made payments of Rs.60,000/- for NRM , Rs. 29,135/- for articlas and Rs.1,15,000/- for road and 2 bills for bridge and released Rs.1.00 Lakh without approval of work from Gram Sabha and got executed the alternate work violating the estimate, without getting approval of competent authority and spent Rs.92,714/- illegally and thereby, you the DGOs failed to maintain absolute intergrity and devotion to duty and committed an act which is unbecoming of Government Servents and thus, you are guilt of misconduct under Rule (1) (i) to (iii) of KCS (conduct Rules,1966"

ವಿಚಾರಣಾಧಿಕಾರಿಯವರು ಮೇಲ್ಕಂಡ ಆರೋಪಗಳ ಕುರಿತು ವಿವರವಾದ ಇಲಾಖಾ ವಿಚಾರಣೆ ಕೈಗೊಂಡಿದ್ದು ಶಿಸ್ತು ಪ್ರಾಧಿಕಾರದ ಪರ ಎರಡು ಸಾಕ್ಷಿಗಳು ಹಾಗೂ ಹಲವಾರು ದಾಖಲೆಗಳನ್ನು ಪರಿಶೀಲಿಸಿ ಅಂತಿಮವಾಗಿ ಸಲ್ಲಿಸಿರುವ ವರದಿಯಲ್ಲಿ ಎಲ್ಲಾ ಆರೋಪಿತರ ವಿರುದ್ದದ ಆರೋಪಗಳು ಇಲಾಖೆ ವಿಚಾರಣೆಯಲ್ಲಿ ಸಾಭೀತಾಗಿರುತ್ತವೆ ಎಂದು ನಿರ್ಣಯಿಸಿರುತ್ತಾರೆ.

2 ನೇ ಕಾರಣ ಕೇಳುವ ನೋಟಿಸ್‌ಗೆ ಶ್ರೀ ಎಲ್.ಎನ್. ಶಂಕರನಾರಾಯಣ, ಹಿಂದಿನ ಸ.ಕಾ.ಇಂ ಮತ್ತು ಶ್ರೀ ಎಂ.ವಿ.ರವಿನಂದನ, ಸಹಾಯಕ ಇಂಜಿನಿಯರ್ ಇಬ್ಬರು ಕೆಲವೊಂದು ದಾಖಲೆಗಳೊಂದಿಗೆ ಒಂದೇ ರೀತಿಯ ವಿವರವಾದ ವಿವರಣೆಯನ್ನು ಸಲ್ಲಿಸಿರುತ್ತಾರೆ. ಸದರಿಯವರ ವಿವರಣೆಯಲ್ಲಿನ ಮುಖ್ಯಾಂಶಗಳು ಈ ಕೆಳಕಂಡಂತಿದೆ:-

1. ಒಂದನೇ ಸಾಕ್ಷಿದಾರರು ಶ್ರೀ ಶಂಕರಪ್ಪ ಇವರು ದೂರುದಾರರಾಗಿದ್ದು ವಿಚಾರಣೆಯಲ್ಲಿ ಸಾಕ್ಷ್ಯ ನೀಡಿಕೆಯಲ್ಲಿ ನಮ್ಮಗಳ ಮೇಲೆ ಕ್ರೋದ ಸಾಧಿಸುವಂತಹ ಪ್ರವೃತ್ತಿಯಿಂದ ಹೇಳಿಕೆ ಸಲ್ಲಿಸಿರುತ್ತಾರೆಂದು, ಸದರಿಯವರ ದೂರು ನಮ್ಮಗಳನ್ನು ತೇಜೋವದೆ ಮಾಡುವ ಹುನ್ನಾರವಾಗಿತ್ತೆಂದು;
2. ಎರಡನೇ ಸಾಕ್ಷಿಯು ತನಿಖಾಧಿಕಾರಿಗಳಾಗಿದ್ದು ಅವರುಗಳು ಶಿಸ್ತು ಪ್ರಾಧಿಕಾರದ ಪರ ಸಾಕ್ಷ್ಯ ನುಡಿಯುಲು ಯೋಜಿತರಾಗಿದ್ದರೆಂದು;
3. ಸಾಕ್ಷ್ಯಗಳು ಜೆ.ಸಿ.ಬಿ ಯಂತ್ರ ಬಳಸಿದ ಬಗ್ಗೆ ಯಾವ ಆಧಾರ- ಪುರಾವೆ ಇಲ್ಲವೆಂಬುದನ್ನು, 10.00 ಲಕ್ಷದ ಒಳಗಿನ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡುವ ಪಂ.ರಾ.ಇಂ ಉಪವಿಭಾಗ ಸಹಾಯಕ ಇಂಜಿನಿಯರ್ ಇವರಿಗೆ ಇರುತ್ತದೆ ಎಂಬುದನ್ನು ಸಾಕ್ಷ್ಯಗಳು ಒಪ್ಪುತ್ತಾರೆಂದು;
4. ಸಾಕ್ಷ್ಯಗಳ ಹೇಳಿಕೆಗಳಿಂದ ಬಿಸ್ಕೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕಾಮಗಾರಿಯಲ್ಲಿ ಸರ್ಕಾರಿ ಹಣ ದುರುಪಯೋಗವಾಗಿರುವುದಿಲ್ಲ ಮತ್ತು ಕೈಗೊಂಡ ಕಾಮಗಾರಿಯು ಅನುಮೋದಿತ ಸ್ಥಳದಲ್ಲಿ ನಿರ್ವಹಿಸಲ್ಪಟ್ಟಿದ್ದು, ಸರ್ಕಾರಕ್ಕೆ ವಾಸ್ತವವಾಗಿ ರೂ.22,586/- ಗಳ ಉಳಿತಾಯವಾಗಿದೆ ಎಂಬುದು ಸಾಕ್ಷ್ಯದಿಂದ ಸ್ಪಷ್ಟವಾಗಿದೆಯೆಂದು;
5. ವಿಚಾರಣಾಧಿಕಾರಿಗಳು ನಾವು ಸಾಕ್ಷಿಗಳ ಬಾಯಲ್ಲಿ ಹೊರಡಿಸಿದ ಸತ್ಯಾಂಶಗಳನ್ನು ಹಾಗೂ ನಮ್ಮ ಅಂತಿಮ ಲಿಖಿತ ವಾದವನ್ನು ಸಲ್ಲಿಸಿದ ರಕ್ಷಣಾ ಅಂಶಗಳನ್ನು ತಿರಸ್ಕರಿಸಿ, ಆಧಾರ ರಹಿತವಾದ ನಿರ್ಣಯಕ್ಕೆ ಬಂದಿರುತ್ತಾರೆಂದು;
6. ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಒಪ್ಪಿಕೊಂಡು ಅದನ್ನು ಜಾರಿ ಮಾಡುವ ಯಾವ ವಿಧಿಯು ಶಿಸ್ತು ಪ್ರಾಧಿಕಾರಕ್ಕೆ ಇರುವುದಿಲ್ಲವೆಂದು ತಿಳಿಸಿ ಕ.ನಾ.ಸೇ(ವ.ನಿ.ಮೇ) ನಿಯಮಗಳ ನಿಯಮ11 ಎ ರ ಅನುಸಾರ ಸೂಕ್ತ ನಿರ್ಣಯವನ್ನು ಕೈಗೊಳ್ಳುವಂತೆ ಕೋರಿರುತ್ತಾರೆ. ಅಲ್ಲದೆ, ಈ ಸಂಬಂಧ ಕೆಲವೊಂದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶಗಳನ್ನು ಸಹ ಉಲ್ಲೇಖಿಸಿರುತ್ತಾರೆ.

ಆರೋಪಿತರು ಸಲ್ಲಿಸಿರುವ ವಿವರಣೆಯಲ್ಲಿನ ಅಂಶಗಳು ಸುದೀರ್ಘವಾಗಿದ್ದರೂ ಅವುಗಳೊಂದಿಗೆ ವಿಚಾರಣಾಧಿಕಾರಿಗಳು ವಿಚಾರಣಾ ವರದಿಯಲ್ಲಿ ಚರ್ಚಿಸಿರುವ ಅಂಶಗಳನ್ನು ತಾಳೆ ನೋಡಲಾಗಿ, ಆರೋಪಿತರು ಸಲ್ಲಿಸಿರುವ ಹೇಳಿಕೆಗಳು ವಿಚಾರಣಾಧಿಕಾರಿಗಳ ನಿರ್ಣಯವನ್ನು ಅಲ್ಲಗೆಳೆಯಬಹುದಾದ ಯಾವುದೇ ಅಂಶಗಳನ್ನು ಒಳಗೊಂಡಿರುವುದಿಲ್ಲ.

ಮುಖ್ಯವಾಗಿ ತನಿಖಾಧಿಕಾರಿಗಳು ಸಲ್ಲಿಸಿದ್ದ ತನಿಖಾ ವರದಿಯನ್ನು ಪ್ರದರ್ಶಿತ ದಾಖಲೆ ನಿಶಾನೆ ಪಿ-11 ಮತು 11 ಎ ಎಂದು ಗುರುತಿಸಿಕೊಳ್ಳಲಾಗಿದ್ದು, ಸದರಿ ದಾಖಲೆಯನುಸಾರ ಬಿಸ್ಕೂರು ಮುಖ್ಯ ರಸ್ತೆಯಿಂದ ಪಾಳ್ಯದ ಹಳ್ಳಿ ತಂಗುದಾಣದಿಂದ ಮರಳಿಗುಟ್ಟೆ ರಸ್ತೆಯವರಗೆ ರಸ್ತೆ ಕಾಮಗಾರಿಯನ್ನು

---4

ರೂ.1,15,300 ಅಂದಾಜು ವೆಚ್ಚದಲ್ಲಿ ಕೈಗೊಳ್ಳಲಾಗಿದ್ದು, ಸದರಿ ಕಾಮಗಾರಿಯನ್ನು ಮಂಜೂರಾದ ಅಂದಾಜು ಪಟ್ಟಿಯನುಸಾರ ಅನುಷ್ಠಾನ ಮಾಡದಿರುವುದು ಸ್ಪಷ್ಟ ಇರುತ್ತದೆ. ಮಂಜೂರಾದ ಅಂದಾಜು ಪಟ್ಟಿಯಂತೆ embankment & WBM Grad 267 ಮೀಟರ್ ಉದ್ದಕ್ಕೆ ರಸ್ತೆ ಮಾಡಬೇಕಿದ್ದರೂ ಸಹ ಸದರಿ ಕಾಮಗಾರಿಯನ್ನು ನಿರ್ವಹಿಸದೆ ಮೋರಿ ಕಾಮಗಾರಿಯನ್ನು ಗ್ರಾಮ ಸಭಾದ ಅನುಮೋದನೆ ಇಲ್ಲದೆ ನಿರ್ಮಾಣ ಮಾಡಲಾಗಿದೆ. ಈ ರೀತಿಯ ಬದಲಾದ ಕಾಮಗಾರಿಗೆ ಗ್ರಾಮ ಸಭಾದ ಅನುಮೋದನೆ ಪಡೆದಿರುವುದಿಲ್ಲ. ಅದರೆ ಆಪಾದಿತರು ಈ ಆರೋಪವನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲೆಗಳನ್ನು ತಮ್ಮ ವಿವರಣೆಯೊಂದಿಗೆ ಸಲ್ಲಿಸಿರುವುದಿಲ್ಲ. ಇದಲ್ಲದೆ ಕಾಮಗಾರಿಯನ್ನು ನಿರ್ವಹಿಸಿದ ವಿವರಗಳನ್ನು ಅಳತೆ ಪುಸ್ತಕದಲ್ಲಿ ನಮೂದಿಸದ ವೇಳೆ, ದಿನಾಂಕ: ನಮೂದಿಸಿರುವುದಿಲ್ಲ, ಕಾಮಗಾರಿ ಅನುಷ್ಠಾನಗೊಳಿಸಲು ನೀಡಿದ ಕಾರ್ಯಾದೇಶ, ಸಾಮಗ್ರಿಗಳ ಸರಬರಾಜು ಬಿಲ್ಲಿಗೆ/ಯಂತ್ರದ ಬಾಡಿಗೆ ಬಿಲ್‌ಗೆ ದಿನಾಂಕ ನಮೂದಿಸಿರುವುದಿಲ್ಲ.

ಆಪಾದಿತ ಅಧಿಕಾರಿಗಳು ತಮ್ಮ ವಿವರಣೆಯೊಂದಿಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶಗಳನ್ನು ಉಲ್ಲೇಖಿಸಿದ್ದರೂ ಸದರಿ ತೀರ್ಮಗಳ ಪ್ರಸಕ್ತ ಪ್ರಕರಣಕ್ಕೆ ಯಥಾ ರೀತಿ ಅನ್ವಯವಾಗುತ್ತವೆ ಎಂಬುದನ್ನು ಒಪ್ಪಲು ಸಾಧ್ಯಾವಾಗುವುದಿಲ್ಲ. ಆದ್ದರಿಂದ, ಆರೋಪಿತರು 2 ನೇ ಕಾರಣ ಕೇಳುವ ನೋಟಿಸ್‌ಗೆ ಸಲ್ಲಿಸಿರುವ ವಿವರಣೆಯು ವಿಚಾರಣಾಧಿಕಾರಿಗಳ ನಿರ್ಣಯವನ್ನು ಅಲ್ಲಗೆಳೆಯಲು ಸೂಕ್ತ ಹಾಗೂ ಸಮಾಧಾನಕರವಾಗಿರುವುದಿಲ್ಲ. ಈ ಕಾರಣದಿಂದ ವಿಚಾರಣಾಧಿಕಾರಿಯವರ ನಿರ್ಣಯವನ್ನು ಅಂಗೀಕರಿಸಿ, ಶ್ರೀ ಎಂ.ಎನ್.ಶಂಕರನಾರಾಯಣ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಶ್ರೀ ಎಂ.ವಿ.ರವಿನಂದನ್ ಇವರಿಗೆ ದಂಡನೆ ವಿಧಿಸಲು ಸರ್ಕಾರವು ನಿರ್ಧರಿಸಿರುತ್ತದೆ. ಆದ್ದರಿಂದ ಈ ಆದೇಶ.

**ಆದೇಶ ಸಂಖ್ಯೆ:ಗ್ರಾಅಪ 55 ಇಎಸ್‌ಕ್ಯೂ 18, ಬೆಂಗಳೂರು, ದಿನಾಂಕ:27.9.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಎಂ.ಎನ್. ಶಂಕರನಾರಾಯಣ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಶ್ರೀ ಎಂ.ವಿ.ರವಿನಂದನ, ಸಹಾಯಕ ಇಂಜಿನಿಯರ್ ಇವರ ವಿರುದ್ಧ ಸಾಭೀತಾದ ಆರೋಪಗಳ ಗಂಭೀರತೆಗೆ ಅನುಗುಣವಾಗಿ ಈ ಕೆಳಕಂಡ ದಂಡನೆ ವಿಧಿಸಿ, ಆದೇಶಿಸಿದೆ.

| ಕ್ರ.ಸಂ | ಅಧಿಕಾರಿಯ ಹೆಸರು | ವಿಧಿಸಲಾದ ದಂಡನೆ |
|---|---|---|
| 1. | ಶ್ರೀ ಎಂ.ಎನ್.ಶಂಕರನಾರಾಯಣ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಮಾಗಡಿ | ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957ರ ನಿಯಮ 8 (ivಎ) ರ ಅನುಸಾರ ಸದರಿಯವರ ಕಾಲಿಕ ವೇತನ ಶ್ರೇಣಿಯಲ್ಲಿ ಎರಡು ಹಂತವನ್ನು ಸಂಚಿತ ಪರಿಣಾಮ ಸಹಿತವಾಗಿ ಕೆಳಗಿಳಿಸುವ ದಂಡನೆ ವಿಧಿಸುವುದು. |
| 2. | ಶ್ರೀ ಎಂ.ವಿ.ರವಿನಂದನ, ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಮಾಗಡಿ | ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957ರ ನಿಯಮ 8 (iii) ರ ಅನುಸಾರ ಸದರಿಯವರ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಯಿಡಿಯುವ ದಂಡನೆ ವಿಧಿಸುವುದು. |

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ರಂಗನಗೌಡ) 27/9/18
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.

2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಅಪರ ನಿಬಂಧಕರು ವಿಚಾರಣೆಗಳು-7, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ. ಬೆಂಗಳೂರು.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಮನಗರ
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ಸೇವೆಗಳು-ಎ ಮತ್ತು ಸಿ).
8. ಶ್ರೀ ಎಂ.ಎನ್.ಶಂಕರನಾರಾಯಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ರಾಮನಗರ.
9. ಶ್ರೀ ಎಂ.ವಿ.ರವಿನಂದನ್, ಸಹಾಯಕ ಇಂಜಿನಿಯರ್, ವಿಧಾನ ಸೌಧ ಸೌತ್ ಬ್ಲಾಕ್ ಉಪವಿಭಾಗ, ಬೆಂಗಳೂರು.
10. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
11. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಉಪ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
12. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.